ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ, ಮೂರನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–560001, ಕರ್ನಾಟಕ
E-mail ID: icps.kar@gmail.com Ph.No.080-22867383

ಸಂಖ್ಯೆ:ಮರನಿ/ಮರ/ಕೋವಿಡ್–19–4/64/2021–22 ದಿನಾಂಕ:08.07.2021

**ಸುತ್ತೋಲೆ**

ವಿಷಯ: ಕೋವಿಡ್–19ರ ಸೋಂಕಿತ ಹಾಗೂ ಬಾಧಿತ ಮಕ್ಕಳ ಪಾಲನೆ ಮತ್ತು ರಕ್ಷಣೆಗಾಗಿ **"ಮಕ್ಕಳ ಪರಿವೀಕ್ಷಣೆ ಮತ್ತು ಮಾಹಿತಿ ನಿರ್ವಹಣೆ ವ್ಯವಸ್ಥೆ (Child MIS)"** ಯನ್ನು ಸದುಪಯೋಗಪಡಿಸಿಕೊಳ್ಳುವುದರ ಕುರಿತು.

ಉಲ್ಲೇಖ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸುತ್ತೋಲೆ ಸಂಖ್ಯೆ:ಕಪಂರಾಆ/ಅಭಿವೃದ್ಧಿ/271/21, ದಿನಾಂಕ:21.06.2021.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ಸುತ್ತೋಲೆಯಲ್ಲಿ ಮಗು/ಮಕ್ಕಳು ಕೋವಿಡ್–19 ಸೋಂಕಿತರಾಗಿದ್ದಲ್ಲಿ ಅಂಥಹ ಮಗು/ಮಕ್ಕಳನ್ನು **"ಕೋವಿಡ್ ಸೋಂಕಿತ ಮಗು/ಮಕ್ಕಳು" (Covid Infected Child/Children)** ಎಂದು ಮಗುವಿನ/ಮಕ್ಕಳ ತಂದೆ ಅಥವಾ ತಾಯಿ ಅಥವಾ ಪೋಷಕರು ಇವರಲ್ಲಿ ಒಬ್ಬರು/ಇಬ್ಬರು ಕೋವಿಡ್–19 ಸೋಂಕಿತರಾಗಿದ್ದಲ್ಲಿ ಅಂಥಹವರ ಮಗು/ಮಕ್ಕಳನ್ನು **"ಕೋವಿಡ್ ಬಾಧಿತ ಮಗು/ಮಕ್ಕಳು" (Covid Affected Child/Children)** ಎಂದು ಪರಿಗಣಿಸಲಾಗುವುದು. ಇಂತಹ ಮಕ್ಕಳ ಸ್ಥಿತಿಗತಿಗಳನ್ನು ಪ್ರಾರಂಭಿಕ ಹಂತದಿಂದ ಮಕ್ಕಳು/ಪೋಷಕರು ಸೋಂಕಿನಿಂದ ಗುಣಮುಖರಾಗುವವರೆಗೆ ಅಗತ್ಯವಿರುವಲ್ಲಿ 18 ವರ್ಷ ಪೂರ್ಣಗೊಳ್ಳುವವರೆಗೆ ಅಲ್ಪಾವಧಿ/ಮಧ್ಯಾವಧಿ/ದೀರ್ಘಾವಧಿ ಕಾಲದ ಆರೈಕೆಗೆ ಸೂಕ್ತ ವ್ಯವಸ್ಥೆಯನ್ನು ಮಾಡಲು ಮತ್ತು ಪ್ರಕ್ರಿಯೆಯನ್ನು ಕಾಲ ಕಾಲಕ್ಕೆ ನಿರಂತರವಾಗಿ ಗಮನಿಸಲು ಸಂಬಂಧಿಸಿದಂತೆ **"ಮಕ್ಕಳ ಪರಿವೀಕ್ಷಣೆ ಮತ್ತು ಮಾಹಿತಿ ನಿರ್ವಹಣೆ ವ್ಯವಸ್ಥೆ"** (Child MIS) ಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ರೂಪಿಸಲಾಗಿದೆ(ಪ್ರತಿ ಲಗತ್ತಿಸಿದೆ).

ಸದರಿ ಸುತ್ತೋಲೆಯಂತೆ ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳ ಗುರುತಿಸುವಿಕೆ ಮತ್ತು ಅವರಿಗೆ ಸೂಕ್ತ ಪುನರ್ವಸತಿ ಕಲ್ಪಿಸಲು ಈ **"ಮಕ್ಕಳ ಪರಿವೀಕ್ಷಣೆ ಮತ್ತು ಮಾಹಿತಿ ನಿರ್ವಹಣೆ ವ್ಯವಸ್ಥೆ (Child MIS)"** ನ್ನು ಬಳಸಿಕೊಳ್ಳಲು ಸೂಚಿಸಿದೆ ಹಾಗೂ **"ಮಕ್ಕಳ ಪರಿವೀಕ್ಷಣೆ ಮತ್ತು ಮಾಹಿತಿ ನಿರ್ವಹಣೆ ವ್ಯವಸ್ಥೆ (Child MIS)"** ನಿಂದ ಎಲ್ಲಾ ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೊಂದಿಗೆ ನಿರಂತರ ಸಮನ್ವಯ ಮತ್ತು ಸಹಕಾರ ನೀಡಲು ಸಹಾ ಸೂಚಿಸಿದೆ.

ಇದರಂತೆ ಅಗತ್ಯ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಮಾಹಿತಿಯ ಮೊದಲನೆಯ ವರದಿಯನ್ನು ದಿನಾಂಕ:20–07–2021 ರ ಒಳಗೆ ಹಾಗೂ ನಂತರ ಪ್ರತೀ ವಾರ ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.

2......

F/Covid-19 2nd Ale

**ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:**

1. ಎಲ್ಲಾ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು.
2. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
3. ಎಲ್ಲಾ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ.
4. ಎಲ್ಲಾ ಜಿಲ್ಲೆಯ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು, ಮಕ್ಕಳ ವಿಶೇಷ ಪೊಲೀಸ್ ಘಟಕ.
5. ತಾಲ್ಲೂಕು ಸಹಾಯಕ ಮಕ್ಕಳ ರಕ್ಷಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
6. ನೋಡಲ್ ಸಂಯೋಜಕರು, ಜಿಲ್ಲಾ ಮಕ್ಕಳ ಸಹಾಯವಾಣಿ–1098, ಜಿಲ್ಲಾ ನೋಡಲ್ ಸಂಸ್ಥೆ.
7. ಕಛೇರಿ ಪ್ರತಿ

F/Covid-19 2nd Ale

ಕರ್ನಾಟಕ ಸರ್ಕಾರ
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು – 560 009.

ಸಂಖ್ಯೆ:ಕಪಂರಾಆ/ಅಭಿವೃದ್ಧಿ/ 271 /2021 ದಿನಾಂಕ:21.06.2021

## ಸುತ್ತೋಲೆ

**ವಿಷಯ :** ರಾಜ್ಯದಲ್ಲಿ ಕೋವಿಡ್-19ರ ಸೋಂಕಿತ ಹಾಗೂ ಬಾಧಿತ ಮಕ್ಕಳ ಆರೈಕೆ ಮತ್ತು ರಕ್ಷಣೆಗಾಗಿ " ಮಕ್ಕಳ ಪರಿವೀಕ್ಷಣೆ ಮತ್ತು ಮಾಹಿತಿ ನಿರ್ವಹಣೆ ವ್ಯವಸ್ಥೆ" ಕುರಿತು

**ಉಲ್ಲೇಖ :** 1. ಸರ್ಕಾರದ ಆದೇಶ ಸಂಖ್ಯೆ: ಕಂಇ158 ಟಿಎನ್ ಆರ್ 2020(2) ದಿನಾಂಕ: 03-05-2021

2. ಸರ್ಕಾರದ ಸುತ್ತೋಲೆ ಸಂಖ್ಯೆ:ಕಪಂರಾಆ/ಅಭಿವೃದ್ಧಿ/202/2021 ದಿನಾಂಕ: 15-05-2021

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಕೋವಿಡ್-19 ಸೋಂಕಿನಿಂದಾಗಿ ಕೆಲವು ಮಕ್ಕಳು ತಮ್ಮ ತಂದೆ-ತಾಯಿಯನ್ನು/ಪೋಷಕರನ್ನು ಕಳೆದುಕೊಂಡು ಅನಾಥರಾಗಿದ್ದಾರೆ, ಮತ್ತೊಂದೆಡೆ ಕೆಲವು ಮಕ್ಕಳು ಕೋವಿಡ್ ಸೋಂಕಿನಿಂದ ಬಳಲುತ್ತಿದ್ದಾರೆ. ಸರ್ಕಾರವು ಮಕ್ಕಳ ಈ ಸ್ಥಿತಿಗೆ ಕೂಡಲೇ ಸ್ಪಂದಿಸಿ ಉಲ್ಲೇಖ(1) ಆದೇಶದ ಮೂಲಕ ಕೋವಿಡ್-19 ಸೋಂಕಿನಿಂದ ಪೋಷಕರನ್ನು ಕಳೆದುಕೊಂಡ ಅನಾಥರಾದ ಮಕ್ಕಳಿಗೆ ಅತ್ಯಾವಶ್ಯಕ ಸೌಕರ್ಯಗಳನ್ನು ಆದ್ಯತೆಯ ಆಧಾರದ ಮೇಲೆ ಒದಗಿಸುವ ಸಲುವಾಗಿ ಮುಂದಾಗಿದ್ದು ಮಕ್ಕಳ ರಕ್ಷಣಾ ಕಾರ್ಯಪಡೆಯನ್ನು ಸಹ ರಚಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕೂಡ ಪೋಷಕರನ್ನು ಕಳೆದುಕೊಂಡ ಅನಾಥ ಮಕ್ಕಳ ರಕ್ಷಣೆಗೆ ಮುಂದಾಗಿದ್ದು, ಉಲ್ಲೇಖಿತ ಸುತ್ತೋಲೆ(2) ಮೂಲಕ ಅನಾಥ ಮಕ್ಕಳ ರಕ್ಷಣೆಗೆ ಗ್ರಾಮ ಪಂಚಾಯಿತಿ ಕಾರ್ಯಪಡೆಗೆ ನಿರ್ದೇಶನಗಳನ್ನು ನೀಡಲಾಗಿದೆ. ಕೋವಿಡ್-19ರ ಸಾಂಕ್ರಾಮಿಕದಿಂದಾಗಿ ರಾಜ್ಯದಲ್ಲಿ 18 ವರ್ಷದೊಳಗಿನ ಅನೇಕ ಮಕ್ಕಳು ಕೋವಿಡ್ ಸೋಂಕಿತ ಹಾಗೂ ಬಾಧಿತರಾಗುತ್ತಿದ್ದಾರೆ. ಕೋವಿಡ್ ಸೋಂಕಿತ ಹಾಗೂ ಬಾಧಿತ ಮಕ್ಕಳ ಆರೋಗ್ಯ, ಆರೈಕೆ, ರಕ್ಷಣೆ ಮತ್ತು ಅಭಿವೃದ್ಧಿ ಕುರಿತು 18 ವರ್ಷ ಪೂರ್ಣಗೊಳ್ಳುವವರೆಗೆ ನಿಗಾವಹಿಸುವುದು, ಕಾಲ ಕಾಲಕ್ಕೆ ಅಗತ್ಯ ಕ್ರಮ ಕೈಗೊಳ್ಳುವುದು ಸರ್ಕಾರ ಮತ್ತು ನಾಗರಿಕ ಸಮಾಜದ ಹೊಣೆಯಾಗಿದೆ.

ಮಗು/ಮಕ್ಕಳು ಕೋವಿಡ್-19 ಸೋಂಕಿತರಾಗಿದ್ದಲ್ಲಿ ಅಂಥಹ ಮಗು/ಮಕ್ಕಳನ್ನು **"ಕೋವಿಡ್ ಸೋಂಕಿತ ಮಗು/ಮಕ್ಕಳು" (Covid Infected Child/Children)** ಎಂದು ಮಗುವಿನ/ಮಕ್ಕಳ ತಂದೆ ಅಥವಾ ತಾಯಿ ಅಥವಾ ಪೋಷಕರು ಇವರಲ್ಲಿ ಒಬ್ಬರು/ಇಬ್ಬರು ಕೋವಿಡ್-19 ಸೋಂಕಿತರಾಗಿದ್ದಲ್ಲಿ ಅಂಥಹವರ ಮಗು/ಮಕ್ಕಳನ್ನು **"ಕೋವಿಡ್ ಬಾಧಿತ ಮಗು/ಮಕ್ಕಳು" (Covid Affected Child/Children)** ಎಂದು ಪರಿಗಣಿಸಲಾಗುವುದು. ಇಂಥಹ ಮಕ್ಕಳ ಸ್ಥಿತಿಗತಿಗಳನ್ನು ಪ್ರಾರಂಬಿಕ ಹಂತದಿಂದ ಮಕ್ಕಳು/ಪೋಷಕರು ಸೋಂಕಿನಿಂದ ಗುಣಮುಖರಾಗುವವರೆಗೆ ಅಗತ್ಯವಿರುವಲ್ಲಿ 18 ವರ್ಷ ಪೂರ್ಣಗೊಳ್ಳುವವರೆಗೆ ಅಲ್ಪಾವಧಿ/ಮಧ್ಯಾವಧಿ/ದೀರ್ಘಾವಧಿ ಕಾಲದ ಆರೈಕೆಗೆ ಸೂಕ್ತ ವ್ಯವಸ್ಥೆಯನ್ನು ಮಾಡಲು ಮತ್ತು ಪ್ರಕ್ರಿಯೆಯನ್ನು ಕಾಲ ಕಾಲಕ್ಕೆ ನಿರಂತರವಾಗಿ ಗಮನಿಸಲು ಸಂಬಂಧಿಸಿದಂತೆ **"ಮಕ್ಕಳ ಪರಿವೀಕ್ಷಣೆ ಮತ್ತು ಮಾಹಿತಿ ನಿರ್ವಹಣೆ ವ್ಯವಸ್ಥೆ" (Child MIS)** ಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ರೂಪಿಸಲಾಗಿದೆ. ಮಾಹಿತಿಯನ್ನು ಪಂಚತಂತ್ರ ತಂತ್ರಾಂಶದ ಮೂಲಕ ಅಳವಡಿಸಲು ಈ ಕೆಳಗಿನ ಲಿಂಕ್ ಸೃಜಿಸಲಾಗಿದೆ.

**ಇತರೆ --> ಪಂಚಾಯತ್ ವಿವರಗಳು --> ಗ್ರಾಮೀಣ ಪ್ರದೇಶದ ಮಕ್ಕಳ ಕೋವಿಡ್-19 ವಿವರಗಳು**

**Child MIS** ಕೆಳಕಂಡ ವೈಶಿಷ್ಟ್ಯಗಳನ್ನು ಹೊಂದಿದೆ.

- ಮಗುವಿನ ತಂದೆ/ತಾಯಿ/ಪೋಷಕರಲ್ಲಿ ಒಬ್ಬರು ಅಥವಾ ಇಬ್ಬರು ಕೂಡ ಕೋವಿಡ್-19 ಸೋಂಕಿತರಾಗಿರುವುದು ಮತ್ತು ಅವರುಗಳು ಮನೆಯಲ್ಲಿಯೇ ಪ್ರತ್ಯೇಕತೆಯಲ್ಲಿ ಇದ್ದಾರೆಯೇ ಅಥವಾ ಕೋವಿಡ್ ಕೇರ್ ಸೆಂಟರ್ ನಲ್ಲಿ ಇದ್ದಾರೆಯೇ ಅಥವಾ ಹೆಚ್ಚುವರಿ ಆರೋಗ್ಯ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿದ್ದಾರೆ ಎಂಬುದು ತಿಳಿಯುತ್ತದೆ.
- ಮಗುವಿನ ತಂದೆ/ತಾಯಿ/ಪೋಷಕರಲ್ಲಿ ಒಬ್ಬರು ಅಥವಾ ಇಬ್ಬರು ಕೂಡ ಕೋವಿಡ್-19 ಸೋಂಕಿತರಾಗಿದ್ದಲ್ಲಿ ಮಗುವು ಯಾರ ಆರೈಕೆ ಯಲ್ಲಿದೆ, ಸುರಕ್ಷಿತವಾಗಿದೆಯೇ ಅಥವಾ ಮಗುವಿಗೆ ಆ ಸಂದರ್ಭದಲ್ಲಿ ಅಗತ್ಯವಿರುವ ಆರೈಕೆ ಕುರಿತು ತಿಳಿಯುತ್ತದೆ.
- ಮಗುವಿನ ತಂದೆ/ತಾಯಿ/ಪೋಷಕರಲ್ಲಿ ಒಬ್ಬರು ಅಥವಾ ಇಬ್ಬರು ಕೂಡ ಕೋವಿಡ್-19 ಸೋಂಕಿನಿಂದ ಮರಣ ಹೊಂದಿದ ಬಗ್ಗೆ, ಮತ್ತು ಪೋಷಕರ ಮರಣದಿಂದಾಗಿ ಮಗುವಿನ ಆರೈಕೆಯ ಸ್ಥಿತಿಯ ಬಗ್ಗೆಯು ತಿಳಿಯುತ್ತದೆ.
- ಪೋಷಕರು ಮರಣ ಹೊಂದಿದಲ್ಲಿ, ಮಗುವು ಯಾರ ಮತ್ತು ಎಲ್ಲಿ ಆರೈಕೆಯನ್ನು ಪಡೆಯಲಾಗುತ್ತಿದೆ, ಸುರಕ್ಷಿತವಾಗಿದೆಯೇ? ಮಕ್ಕಳ ಕಲ್ಯಾಣ ಸಮಿತಿಯ ಗಮನಕ್ಕೆ ಬಂದಿದೆಯೇ?, ಮಕ್ಕಳ ಕಲ್ಯಾಣ ಸಮಿತಿಯ ಆದೇಶಗಳು, ಸದರಿ ಆದೇಶದ ಪಾಲನೆ ಮುಂತಾದ ವಿವರಗಳನ್ನು ತಿಳಿಯಲು ಸಾಧ್ಯವಾಗುತ್ತದೆ.
- ಮಗುವಿಗೆ ಕೋವಿಡ್-19ರ ಲಕ್ಷಣಗಳು ಕಂಡುಬಂದಲ್ಲಿ, ಕೋವಿಡ್ ಸೋಂಕಿತರಾದಲ್ಲಿ ಮಗುವು ಪಡೆಯುತ್ತಿರುವ ಆರೋಗ್ಯ ಸೇವೆಗಳು ಮತ್ತು ಆರೈಕೆ (ಅಲ್ಪಾವಧಿ/ಮಧ್ಯಮ/ದೀರ್ಘಾವಧಿ) ಕುರಿತು ತಿಳಿಯುತ್ತದೆ.
- ಕೋವಿಡ್-19 ಸೋಂಕಿತ ಮತ್ತು ಬಾಧಿತ ಮಕ್ಕಳ ಸ್ಥಿತಿಗತಿ ಹಾಗೂ ಮಗುವಿಗೆ ಅಗತ್ಯ ವಿರುವ ಆರೋಗ್ಯ ಸೇವೆಗಳು ಮತ್ತು ಆರೈಕೆ ಕುರಿತು ಸ್ಪಷ್ಟ ಮಾಹಿತಿ ಲಭ್ಯವಾಗುವುದರಿಂದ, ಮಗುವಿನ ಆರೈಕೆ, ರಕ್ಷಣೆ ಮತ್ತು ಅಭಿವೃದ್ಧಿ ಕುರಿತು ಸಂಬಂಧಿಸಿದವರು ಸೂಕ್ತ ಕ್ರಮ ಕೈಗೊಳ್ಳಲು ಮತ್ತು ಅನುಪಾಲನೆ ಮಾಡಲು ತುಂಬಾ ಉಪಯುಕ್ತವಾಗಲಿದೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ಕೋವಿಡ್ ಸೋಂಕಿತ ಮತ್ತು ಬಾಧಿತ ಮಕ್ಕಳ ಸ್ಥಿತಿ ತಿಳಿಯಲು ಮತ್ತು ಅಂಥಹ ಮಕ್ಕಳ ಸೂಕ್ತ ಆರೈಕೆ ಮತ್ತು ರಕ್ಷಣೆಗಾಗಿ **Child MIS** ನ್ನು ವ್ಯವಸ್ಥಿತವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸುವುದು ಅತ್ಯಗತ್ಯ ಮತ್ತು ಅಷ್ಟೇ ಪ್ರಾಮುಖ್ಯವಾಗಿದೆ. ಕಾರಣ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು **Child MIS ನ ಸ್ಪಷ್ಟ ಮಾಹಿತಿಯನ್ನು ಪಡೆದು,** ಆಯಾ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ತರಬೇತಿ, ಮಾರ್ಗದರ್ಶನ ನೀಡಿ ಈ ಕೆಳಕಂಡ ಕ್ರಮಕ್ಕೆ ಸೂಚಿಸಿದೆ.

- ಗ್ರಾಮ ಪಂಚಾಯಿತಿಯ ಕಾರ್ಯಪಡೆಯ ಮೂಲಕ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಕೋವಿಡ್ ಸೋಂಕಿತ ಮತ್ತು ಬಾಧಿತ ಮಕ್ಕಳನ್ನು ಗುರುತಿಸಿ, ಅಂಥಹ ಮಕ್ಕಳ ವಾಸ್ತವ ಸ್ಥಿತಿ ಕುರಿತು ಮಾಹಿತಿಯನ್ನು ಪಡೆಯಬೇಕು.
- ಸಂಗ್ರಹಿಸಲಾದ ಕೋವಿಡ್ ಸೋಂಕಿತ ಮತ್ತು ಬಾಧಿತ ಮಕ್ಕಳ ವಿವರಗಳನ್ನು **Child MIS** ಗಾಗಿ ರೂಪಿಸಲಾಗಿರುವ ಪಂಚತಂತ್ರ ತಂತ್ರಾಂಶದಲ್ಲಿ ಈ ಕೆಳಗಿನ ಲಿಂಕ್ ಮೂಲಕ ಅಳವಡಿಸಬೇಕು.

  **ಇತರೆ --> ಪಂಚಾಯತ್ ವಿವರಗಳು --> ಗ್ರಾಮೀಣ ಪ್ರದೇಶದ ಮಕ್ಕಳ ಕೋವಿಡ್-19 ವಿವರಗಳು**
- ಮಗುವಿನ ಸ್ಥಿತಿ ಮತ್ತು ಅಗತ್ಯಕ್ಕೆ ಅನುಗುಣವಾಗಿ ಮಗುವಿನ ಆರೈಕೆ ಮತ್ತು ರಕ್ಷಣೆಗಾಗಿ ಗ್ರಾಮ ಪಂಚಾಯಿತಿಯಿಂದ ಅಗತ್ಯ ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಅಂಥಹ

ಮಗು/ಮಕ್ಕಳಿಗೆ ಆರೈಕೆ ಮತ್ತು ರಕ್ಷಣೆ ವ್ಯವಸ್ಥೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಆಗಿದ್ದಲ್ಲಿ, ಅಂಥಹ ಮಕ್ಕಳ ನಿಗಾ ವಹಿಸಿ ಅನುಸರಣೆ ಮಾಡಬೇಕು.

- ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹ ಅಧಿಕಾರಿಗಳು ಒಟ್ಟು ಪ್ರಕ್ರಿಯೆಯನ್ನು ಕಾಲ ಕಾಲಕ್ಕೆ ಪರಿವೀಕ್ಷಿಸಿ, ತಾಲ್ಲೂಕು ಮಕ್ಕಳ ರಕ್ಷಣಾ ಅಧಿಕಾರಿಗಳೊಂದಿಗೆ ಸಂ[illegible] ಕೋವಿಡ್ ಸೋಂಕಿತ ಮತ್ತು ಬಾಧಿತ ಮಕ್ಕಳ ಆರೈಕೆ ಮತ್ತು ರಕ್ಷಣೆಗೆ ಸೂಕ್ತ [illegible] ಕೈಗೊಳ್ಳುವುದು.

ಆಯುಕ್ತರು,
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬೆಂಗಳೂರು

**ಸೂಕ್ತ ಕ್ರಮಕ್ಕಾಗಿ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯ ನಿರ್ವಾಹಕ ಅಧಿಕಾರಿಗಳು(ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಮುಖಾಂತರ).
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು(ತಾಲ್ಲೂಕು ಪಂಚಾಯಿತಿಗಳ ಕಾರ್ಯ ನಿರ್ವಾಹಕ ಅಧಿಕಾರಿಗಳ ಮುಖಾಂತರ).

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
3. ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯ, ವಿವಿಗೋಪುರ, ಬೆಂಗಳೂರು.
4. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, 4ನೇ ಮಹಡಿ, ಕೃಷಿಭವನ, ನೃಪತುಂಗ ರಸ್ತೆ, ರಾಣಿಚನ್ನಮ್ಮ ವೃತ್ತ, ಬೆಂಗಳೂರು.
5. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ. (ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರ ಮೂಲಕ)
6. ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು. (ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರ ಮೂಲಕ)
7. ಹೆಚ್ಚುವರಿ ಪ್ರತಿ ಶಾಖಾ ರಕ್ಷಕ ಕಡತ.